# ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.,

ಪ್ರಧಾನ ಕಛೇರಿ: ನಂ.102, ಈಸ್ಟ್ ಪಾರ್ಕ್ ರಸ್ತೆ, 7ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.
ನೋಂದಣಿ ಸಂಖ್ಯೆ: 1413/1919-20, ಸ್ಥಾಪನಾ ದಿನಾಂಕ: 20-06-1920

## 105ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಸೂಚನಾ ಪತ್ರ

ಸನ್ಮಾನ್ಯ ಸದಸ್ಯರೇ,

**ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು-03,** ಇದರ 105ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು **ದಿನಾಂಕ 31-08-2025 ರ ಭಾನುವಾರ ಬೆಳಿಗ್ಗೆ 10.00 ಘಂಟೆಗೆ** ಸರಿಯಾಗಿ ಬ್ಯಾಂಕಿನ **ಅಧ್ಯಕ್ಷರಾದ ಶ್ರೀಯುತ ಎನ್.ಎಂ. ಸುರೇಶ್** ರವರ ಅಧ್ಯಕ್ಷತೆಯಲ್ಲಿ **ಶ್ರೀ ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ನಂ. 17, ಗೋಪಾಲ ಟಾಕೀಸ್ ಪಕ್ಕದಲ್ಲಿ, ಯಶವಂತಪುರ, ಬೆಂಗಳೂರು-22** ಈ ಕೆಳಗೆ ಸೂಚಿಸಿರುವ ವಿಷಯಗಳನ್ನು ಪರಿಶೀಲಿಸಲು ಮತ್ತು ಅಂಗೀಕರಿಸಲು ಕರೆಯಲಾಗಿದೆ. ಮಾನ್ಯ ಸದಸ್ಯರು ದಯಮಾಡಿ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಪ್ರಾರ್ಥನೆ.

### ವಿಷಯಗಳು:

1) ಪ್ರಾರ್ಥನೆ
2) 105 ನೇ ಸರ್ವಸದಸ್ಯರ ಮಹಾಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲಿಸುವುದು.
3) ವರದಿ ಸಾಲಿನಲ್ಲಿ ಮೃತರಾದ ಸದಸ್ಯರುಗಳಿಗೆ ಸಂತಾಪ ಸೂಚನೆ.
4) ಅಧ್ಯಕ್ಷರಿಂದ ಸ್ವಾಗತ ಭಾಷಣ
5) 104ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಓದಿ ದಾಖಲಿಸುವುದು.
6) 2024-25ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯ ಪರಿಗಣನೆ
7) 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಲೆಕ್ಕಪರಿಶೋಧಿತ ಆಸ್ತಿ ಜವಾಬ್ದಾರಿ ಪಟ್ಟಿ, ಲಾಭ-ನಷ್ಟ ತಃಖ್ತೆ ಮತ್ತು ಇತರ ಆರ್ಥಿಕ ತಃಖ್ತೆಗಳ ಪರಿಗಣನೆ ಹಾಗೂ ಅದರ ಬಗ್ಗೆ ಆಡಳಿತ ಮಂಡಲಿಯು ತೆಗೆದುಕೊಂಡ ಕ್ರಮಗಳ ಪರಿಗಣನೆ.
8) 2024-25ನೇ ಸಾಲಿನ ಆಯವ್ಯಯ ಹೆಚ್ಚುವರಿ ಖರ್ಚುಗಳಿದ್ದಲ್ಲಿ, ಅಂತಹ ಖರ್ಚುಗಳ ಅನುಮೋದನೆ.
9) ನಿಯಮಾನುಸಾರ 2024-25ನೇ ಸಾಲಿನ ನಿವ್ವಳ ಲಾಭದ ವಿನಿಯೋಗ ಮತ್ತು ಲಾಭಾಂಶ ಪ್ರಮಾಣದ ಅನುಮೋದನೆ (ಆರ್‌ಬಿಐ ನಿಬಂಧನೆಗಳೊಳಪಟ್ಟು)
10) ಬ್ಯಾಂಕಿನ ಉಪನಿಯಮಗಳ ತಿದ್ದುಪಡಿಗಳ ಅನುಮೋದನೆ. (ಪುಟ-6)
11) ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.
12) 2025-26ನೇ ಸಾಲಿನ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ರಿಸರ್ವ್ ಬ್ಯಾಂಕಿನ ನಿಯಮಾನುಸಾರ ನೇಮಿಸುವುದು ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವುದು.
13) ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ನೀಡಲಾದ ಸಾಲಗಳ ಮತ್ತು ಮುಂಗಡಗಳ ಸುಸ್ತಿ ಬಾಕಿ ಯಾವುದಾದರೂ ಇದ್ದರೆ ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ.

14) ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರು, ಅವರು ಆ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಅಥವಾ ಸಂಬಂಧಿತ ಸಭೆಗಳಿಗೆ ಹಾಜರಾದುದಕ್ಕೆ ಸಂಬಂಧಪಟ್ಟಂತೆ ಅವರಿಗೆ ಸಂದಾಯ ಮಾಡಿದ ಸಂಭಾವನೆ,

15) ಸಿಬ್ಬಂದಿಗಳ ನೇಮಕಾತಿ ಹಾಗೂ ವೇತನ ಇತರೆ ಆರ್ಥಿಕ ಸೌಲಭ್ಯಗಳ ಪರಿಶೀಲನೆ ಹಾಗೂ ಅಗತ್ಯ ಕ್ರಮ.

16) ಬ್ಯಾಂಕು ತನ್ನ ನಿಧಿಗಳನ್ನು ಕಾಯ್ದೆಯ ಕಲಂ 58ರ ಪ್ರಕಾರ ತೊಡಗಿಸಲು ಅನುಮತಿ ಕೊಡುವುದು.

17) ವಿಚಾರಣಾ ವರದಿ ಯಾವುದಾದರೂ ಇದ್ದರೆ, ಅದರ ಪರಿಶೀಲನೆ.

18) ನಿರ್ಣಯಗಳನ್ನು ಅಂಗೀಕರಿಸುವುದು (ಇದ್ದಲ್ಲಿ).

19) ಸೂಕ್ತ ಮುನ್ಸೂಚನೆ ಮೇರೆಗೆ ಪರಿಗಣಿಸಬಹುದಾದ ಇತರೆ ವಿಷಯಗಳು.

20) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

21) ವಂದನಾರ್ಪಣೆ.

ಸಹಿ/–
ಶ್ರೀ ಎಂ.ಜಿ. ಗುರುಪ್ರಸಾದ್
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ (ಪ್ರಭಾರ)

ಬೆಂಗಳೂರು.
ದಿನಾಂಕ: 14–08–2025

---

## –: ಸೂಚನೆ :–

1) ಬ್ಯಾಂಕಿನಿಂದ ಸದಸ್ಯರಿಗೆ ಭಾನುವಾರ ಬೆಳಿಗ್ಗೆ 9.00 ಘಂಟೆಯಿಂದ 11.30 ಘಂಟೆಯವರೆಗೆ ಲಘು ಉಪಹಾರದ ವ್ಯವಸ್ಥೆ ಇರುತ್ತದೆ.

2) ಮಾನ್ಯ ಸದಸ್ಯರುಗಳು ಸರ್ವಸದಸ್ಯರ ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ, 5 ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಅಧ್ಯಕ್ಷರು ಅಥವಾ ಮುಖ್ಯಕಾರ್ಯನಿರ್ವಹಣಾಧಿಕಾರಿ ಇವರಿಗೆ ತಿಳಿಸತಕ್ಕದ್ದು. ನಂತರ ಬಂದ ವಿಷಯಗಳನ್ನು ಮಹಾಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.

3) ನಿಮಗೆ ಸಲ್ಲತಕ್ಕ ಲಾಭಾಂಶವನ್ನು (Dividend) 3 ವರ್ಷದೊಳಗಾಗಿ ಪಡೆಯದೇ ಇದ್ದಲ್ಲಿ, ಬ್ಯಾಂಕಿನ ಬೈಲಾ ಸಂಖ್ಯೆ:111 ರ ಪ್ರಕಾರ ರಿಸರ್ವ್ ಫಂಡ್ ಖಾತೆಗೆ ವರ್ಗಾಯಿಸಬೇಕಾಗುತ್ತದೆ. ಆದ್ದರಿಂದ ಕೂಡಲೇ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ತಮ್ಮ ಉಳಿತಾಯ ಖಾತೆಗಳಿಗೆ ವರ್ಗಾಯಿಸಲು ನಮ್ಮ ಬ್ಯಾಂಕಿನಲ್ಲಿ ಇರುವ ತಮ್ಮ ಉಳಿತಾಯ ಖಾತೆಯ ಸಂಖ್ಯೆಯನ್ನು ಕಛೇರಿಗೆ ಒದಗಿಸಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಅಂತೆಯೇ ಉಳಿತಾಯ ಖಾತೆಯನ್ನು ಹೊಂದಿಲ್ಲದ ಸದಸ್ಯರುಗಳು ಕಡ್ಡಾಯವಾಗಿ ಖಾತೆಯನ್ನು ತೆರೆಯಲು ಕೋರಲಾಗಿದೆ.

4) ಬ್ಯಾಂಕಿನ ಸದಸ್ಯರುಗಳ ವಿಳಾಸಕ್ಕೆ ಕಳುಹಿಸುವ ಕಾಗದ ಪತ್ರಗಳು ತಲುಪದೇ ವಾಪಸ್ಸು ಆಗುತ್ತಿರುವ ಪ್ರಯುಕ್ತ ಮಾನ್ಯ ಸದಸ್ಯರುಗಳು ತಮ್ಮ ಇತ್ತೀಚಿನ ಸರಿಯಾದ ಅಂಚೆ ವಿಳಾಸದ ಸಾಕ್ಷ್ಯ ಪ್ರತಿಗಳನ್ನು ಬ್ಯಾಂಕಿಗೆ ಕೊಡಬೇಕೆಂದು ಕೋರಲಾಗಿದೆ.

**ಪ್ರತಿಭಾ ಪುರಸ್ಕಾರ**

ಬ್ಯಾಂಕಿನ ಸದಸ್ಯರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ದಿನಾಂಕವನ್ನು ಮುಂದಿನ ದಿನದಲ್ಲಿ ಪ್ರಕಟಿಸಲಾಗುವುದು. 2024–25ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಶೇ.75 ಹಾಗೂ ಹೆಚ್ಚಿನ ಅಂಕಗಳಿಸಿರುವ ವಿದ್ಯಾರ್ಥಿಗಳ ಹೆಸರು, ಅಂಕಪಟ್ಟಿ, ಸದಸ್ಯತ್ವದ ಗುರುತಿನ ಚೀಟಿಯ ಪ್ರತಿಗಳೊಂದಿಗೆ ಮಾಹಿತಿಯನ್ನು ಆಡಳಿತ ಕಛೇರಿಗೆ ದಿನಾಂಕ: 30–09–2025 ರೊಳಗೆ ತಲುಪಿಸಬೇಕಾಗಿ ಕೋರಲಾಗಿದೆ.

**ಠೇವಣಿ ವಿಮೆ:** DICGC ವಿಮಾ ಸಂಸ್ಥೆಯು ಠೇವಣಿ ವಿಮೆ ಸೌಲಭ್ಯವನ್ನು ರೂ.5 ಲಕ್ಷಕ್ಕೆ ಹೆಚ್ಚಿಸಿದ್ದು, ಅದರಂತೆ ಪ್ರತೀ ಠೇವಣಿದಾರರ ಗರಿಷ್ಟ ರೂ.5 ಲಕ್ಷದವರೆಗಿನ ಠೇವಣಿಗಳು ವಿಮೆಗೆ ಒಳಪಟ್ಟಿರುತ್ತದೆ.

**–: ವಿಶೇಷ ಸೂಚನೆ :–**

**"ಭದ್ರತಾ ಕಪಾಟುಗಳ ಗ್ರಾಹಕರಿಗೆ"**

ಬ್ಯಾಂಕಿನ ಭದ್ರತಾ ಕಪಾಟುಗಳನ್ನು ಹೊಂದಿರುವ ಗ್ರಾಹಕರಿಗೆ ತಿಳಿಸುವುದೇನೆಂದರೆ ಭಾರತೀಯ ರಿಸರ್ವ್ ಬ್ಯಾಂಕಿನವರ ನಿರ್ದೇಶನದಂತೆ ಭದ್ರತಾ ಕಪಾಟುಗಳನ್ನು ಹೊಂದಿರುವ ಗ್ರಾಹಕರು ಬ್ಯಾಂಕಿನ ಜೊತೆ ಒಪ್ಪಂದ ಕರಾರು ಪತ್ರವನ್ನು ಕಡ್ಡಾಯವಾಗಿ ಮಾಡಿಕೊಳ್ಳಬೇಕು. ಇಲ್ಲವಾದರೆ ಭದ್ರತಾ ಕಪಾಟುಗಳ ಸೌಲಭ್ಯವನ್ನು ಸ್ಥಗಿತಗೊಳಿಸಲಾಗುವುದು.

ರಿಸರ್ವ್ ಬ್ಯಾಂಕ್‌ನ ನಿರ್ದೇಶನದಂತೆ ಪ್ರತಿಯೊಬ್ಬ ಗ್ರಾಹಕರು ಖಡ್ಡಾಯವಾಗಿ ಕೆವೈಸಿ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ. ಕೆವೈಸಿ ದಾಖಲೆಗಳನ್ನು ಸಲ್ಲಿಸದೇ ಇರುವ ಸದಸ್ಯರು ಕೂಡಲೇ ತಮ್ಮ ಶಾಖೆಗಳಲ್ಲಿ ಸಲ್ಲಿಸತಕ್ಕದ್ದು. ಕನಿಷ್ಠ ವರ್ಷಕ್ಕೆ 4 ವ್ಯವಹಾರಗಳನ್ನು ಮಾಡಬೇಕಾಗಿರುತ್ತದೆ. 2 ವರ್ಷಗಳ ಸಾಲಿನಲ್ಲಿ ಯಾವುದೇ ವ್ಯವಹಾರವನ್ನು ನಿರ್ವಹಿಸದ ಗ್ರಾಹಕರ ಖಾತೆಗಳನ್ನು ನಿಷ್ಕ್ರಿಯಗೊಳಿಸಲಾಗುವುದು ಹಾಗೂ ಕಳೆದ 10 ವರ್ಷಗಳಿಂದ ಯಾವುದೇ ವ್ಯವಹಾರವನ್ನು ನಡೆಸದ ಗ್ರಾಹಕರ ಖಾತೆಯನ್ನು ಮುಕ್ತಾಯಗೊಳಿಸಿ ಆರ್‌ಬಿಐ ನ Depositor Education and Awareness Fund (D.E.A.F) ಖಾತೆಗೆ ವರ್ಗಾಯಿಸಲಾಗುವುದು. ಮರಣೋತ್ತರ ನಿಧಿಯಿಂದ ನೀಡುವ ಪರಿಹಾರದ ಹಣವನ್ನು ಮರಣ ಹೊಂದಿದ 1 ವರ್ಷದ ಒಳಗೆ ನಾಮಿನಿಯವರು ಪಡೆಯತಕ್ಕದ್ದು.

**ವಿಶೇಷ ಸೂಚನೆ:** ಈ ಕೆಳಕಂಡ ವಿಷಯಗಳನ್ನು ಕುರಿತಾದ ವಿವರವಾದ ಮಾಹಿತಿಗಳನ್ನು ಒಳಗೊಂಡ ವಾರ್ಷಿಕ ವರದಿಯ ಮುದ್ರಿತ ಪ್ರತಿಗಳನ್ನು ಬ್ಯಾಂಕಿನ ಪ್ರಧಾನ ಕಛೇರಿ ಹಾಗೂ ಎಲ್ಲಾ ಶಾಖೆಗಳಲ್ಲಿ ದಿನಾಂಕ: 21–08–2025 ರಿಂದ ಸದಸ್ಯರಿಗೆ ಲಭ್ಯವಿರುತ್ತದೆ. 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳು ಹಾಗೂ ಮೇಲ್ಕಂಡ ಮಾಹಿತಿಗಳನ್ನು ವೆಬ್‌ಸೈಟ್ ಇಲ್ಲಿಗೆ ಪ್ರವೇಶ ಮಾಡಿ ಪಡೆಯಬಹುದು. ನಿಮ್ಮ ಸದಸ್ಯತ್ವ ಸಂಖ್ಯೆಯೇ ನಿಮ್ಮ "ಪಾಸ್‌ವರ್ಡ್" ಆಗಿರುತ್ತದೆ. ಅದನ್ನು ಮೊದಲ ಬಾರಿ ಪ್ರವೇಶ ಮಾಡಿದ ನಂತರ ಬದಲಾಯಿಸಿಕೊಳ್ಳಬಹುದು.

## ವಿಷಯಗಳ ಮೇಲಿನ ಟಿಪ್ಪಣಿ

**ವಿಷಯ 5 :** ಗಮನಿಸಿದೆ.

**ವಿಷಯ 6 :** ಗಮನಿಸಿದೆ.

**ವಿಷಯ 7 :** ಗಮನಿಸಿದೆ.

**ವಿಷಯ 8 :** 2024–25ನೇ ಸಾಲಿನ ಆಯವ್ಯಯ ಹೆಚ್ಚುವರಿ ಖರ್ಚುಗಳಿದ್ದಲ್ಲಿ, ಅಂತಹ ಖರ್ಚುಗಳ ಅನುಮೋದನೆ.

2024–25ನೇ ಸಾಲಿನಲ್ಲಿ ಇತರೆ ಖರ್ಚುಗಳು ಅಂದಾಜಿಗಿಂತ 7.25 ಲಕ್ಷಗಳು ಹೆಚ್ಚಾಗಿದ್ದು ಇದರಲ್ಲಿ ಚುನಾವಣಾ ವೆಚ್ಚ ಹಾಗೂ ವೈಯಾಲಿಕಾವಲ್ ಶಾಖೆ ನವೀಕರಣ ವೆಚ್ಚ ಒಳಗೊಂಡಿದೆ. ಅಂದಾಜು ಆಯವ್ಯಯ ಪಟ್ಟಿಯನ್ನು ಅಂಗೀಕರಿಸುವುದು.

**ವಿಷಯ 9 :** ನಿಯಮಾನುಸಾರ 2024–25ನೇ ಸಾಲಿನ ನಿವ್ವಳ ಲಾಭದ ವಿನಿಯೋಗ ಮತ್ತು ಲಾಭಾಂಶ ಪ್ರಮಾಣದ ಅನುಮೋದನೆ (ಆರ್.ಬಿ.ಐ ನಿಬಂಧನೆಗಳೊಳಪಟ್ಟು)

**ವಿಷಯ 10 :** ಬ್ಯಾಂಕಿನ ಉಪನಿಯಮಗಳ ತಿದ್ದುಪಡಿಗಳ ಅನುಮೋದನೆ. (ಪುಟ–6)

**ವಿಷಯ 11 :** ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.

2024–25 ನೇ ಸಾಲಿನಲ್ಲಿ 311 ಸದಸ್ಯರನ್ನು ನೇಮಿಸಿಕೊಳ್ಳಲಾಗಿದೆ. 2024–25 ಮತ್ತು 388 ಸದಸ್ಯರು ಮರಣ ಅಥವಾ ರಾಜೀನಾಮೆಯಿಂದಾಗಿ ಸದಸ್ಯತ್ವದಿಂದ ಬಿಡುಗಡೆ ಹೊಂದಿದ್ದಾರೆ.

**ವಿಷಯ 12 :** 2025–26ನೇ ಸಾಲಿನ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ರಿಸರ್ವ್ ಬ್ಯಾಂಕಿನ ನಿಯಮಾನುಸಾರ ನೇಮಿಸುವುದು ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವುದು.

ಮೆ॥ ಬಾಬು ಅಂಡ್ ಬದತ್ ಲೆಕ್ಕಪರಿಶೋಧಕರನ್ನು 2ನೇ ಬಾರಿಗೆ ನೇಮಿಸುವ ಪ್ರಸ್ತಾಪನೆ ಯನ್ನು ರಿಸರ್ವ್ ಬ್ಯಾಂಕಿಗೆ ಕಳುಹಿಸಿದ್ದು, ಮಹಾಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿಷಯ 13 :** ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ನೀಡಲಾದ ಸಾಲಗಳ ಮತ್ತು ಮುಂಗಡಗಳ ಸುಸ್ತಿ ಬಾಕಿ ಯಾವುದಾದರೂ ಇದ್ದರೆ ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ.

ಶ್ರೀಮತಿ ವಸಂತ .ಎ ಬಿನ್ ಚಂದ್ರಶೇಖರ್.ಸಿ ರವರಿಗೆ ಬ್ಯಾಂಕಿನಿಂದ ದಿನಾಂಕ: 13– 02–2023 ರಂದು 3.00 ಕೋಟಿ ರೂಗಳ ಮೀರಳತೆ ಸಾಲವನ್ನು ಅವರ ಕಂಪನಿಯಾದ ಮೆ॥ ಸಂದೀಪ್ ಕನ್ಸ್ಟ್ರಕ್ಷನ್‌ಗೆ ನೀಡಿರುತ್ತದೆ. ತದನಂತರ ಈ ಮೀರಳತೆ ಸಾಲವನ್ನು ದಿನಾಂಕ: 27–03–2024 ರಂದು ನವೀಕರಿಸಲಾಗಿದೆ. ದಿನಾಂಕ: 19–01–2025 ರಂದು ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಶ್ರೀಮತಿ ವಸಂತ .ಎ ರವರ ಪತಿ ಶ್ರೀ ಚಂದ್ರಶೇಖರ್.ಸಿ ರವರು ಚುನಾಯಿತರಾಗಿರುತ್ತಾರೆ. ಈ ಸಾಲವು ಸುಸ್ತಿಯಾಗಿರುವುದಿಲ್ಲ.

**ವಿಷಯ 14 :** ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರು, ಅವರು ಆ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಅಥವಾ ಸಂಬಂಧಿತ ಸಭೆಗಳಿಗೆ ಹಾಜರಾದುದಕ್ಕೆ ಸಂಬಂಧಪಟ್ಟಂತೆ ಅವರಿಗೆ ಸಂದಾಯ ಮಾಡಿದ ಸಂಭಾವನೆ,

ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಇತರ ಭತ್ಯೆಗಳ ಪರಾಮರ್ಶೆ. ಪದಾಧಿಕಾರಿಗಳಿಗೆ ಸಂದಾಯ ಮಾಡಬೇಕಾದ ಸಂಭಾವನೆ, ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಇತರ ಭತ್ಯೆಗಳ ವಿವರಗಳನ್ನು ಉಪನಿಯಮಗಳಲ್ಲಿ ಅಳವಡಿಸಲಾಗಿದೆ.

**ವಿಷಯ 15 :** ಸಿಬ್ಬಂದಿಗಳ ನೇಮಕಾತಿ ಹಾಗೂ ವೇತನ ಇತರೆ ಆರ್ಥಿಕ ಸೌಲಭ್ಯಗಳ ಪರಿಶೀಲನೆ ಹಾಗೂ ಅಗತ್ಯ ಕ್ರಮ.

ಬ್ಯಾಂಕಿನ ಸಿಬ್ಬಂದಿಗಳಿಗೆ ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ನೀಡುವ ವೇತನ ಶ್ರೇಣಿಯನ್ನು ಅಳವಡಿಸಿಕೊಂಡಿದ್ದು, ಅದರಂತೆ ವೇತನ ಶ್ರೇಣಿ, ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳನ್ನು ನೀಡಲಾಗುತ್ತಿದೆ.

**ವಿಷಯ 16 :** ಬ್ಯಾಂಕು ತನ್ನ ನಿಧಿಗಳನ್ನು ಕಾಯ್ದೆಯ ಕಲಂ 58ರ ಪ್ರಕಾರ ತೊಡಗಿಸಲು ಅನುಮತಿ ಕೊಡುವುದು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಭದ್ರತಾ ಪತ್ರಗಳಲ್ಲಿ, ಷೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್ ಮತ್ತು ಷೆಡ್ಯೂಲ್ಡ್ ಸಹಕಾರ ಬ್ಯಾಂಕುಗಳಲ್ಲಿ, ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿ ಪಡೆದ ಯಾವುದೇ ರಾಷ್ಟ್ರೀಕೃತ / ವಾಣಿಜ್ಯ ಬ್ಯಾಂಕುಗಳಲ್ಲಿ ಈಗಾಗಲೇ ಮಾಡಿರುವ ಹೂಡಿಕೆಯನ್ನು ಅನುಮೋದಿಸುವುದು ಮತ್ತು ಮುಂದಿನ ಮಹಾಸಭೆಯವರೆಗೆ ಹೂಡಿಕೆ ಮಾಡಲು ಅನುಮೋದನೆ ನೀಡಬೇಕೆಂದು ಕೋರಲಾಗಿದೆ. ಈ ಹೂಡಿಕೆಗಳು ಭಾರತೀಯ ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ನಿಗದಿಪಡಿಸುವ ಗರಿಷ್ಟ ಮಿತಿಯೊಳಗಿರುತ್ತದೆ.

**ವಿಷಯ 17 :** ವಿಚಾರಣಾ ವರದಿ ಯಾವುದಾದರೂ ಇದ್ದರೆ, ಅದರ ಪರಿಶೀಲನೆ.

ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ, ಬೆಂಗಳೂರು ರವರು ತಮ್ಮ ಆದೇಶ ಸಂಖ್ಯೆ:ಆರ್‌ಸಿಎಸ್/ಯುಬಿಸಿ–6/ದೂ.ಅ/24/2022–23, ದಿನಾಂಕ: 21–12–2023 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರಡಿಯಲ್ಲಿ 04 ವಿಚಾರಣಾಂಶಗಳ ಕುರಿತು ವಿಚಾರಣೆ ಮಾಡಲಾಗಿದ್ದು, ತದನಂತರ ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ, ಬೆಂಗಳೂರು ರವರು ತಮ್ಮ ಆದೇಶ ಸಂಖ್ಯೆ:ಆರ್‌ಸಿಎಸ್/ಯುಬಿಸಿ–6/ದೂ.ಅ/24/2022–23, ದಿನಾಂಕ: 06–01–2024 ರಲ್ಲಿ ಪುನಃ ಇನ್ನು 06 ವಿಚಾರಣಾಂಶಗಳ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರಡಿಯಲ್ಲಿ ವಿಚಾರಣೆ ಮಾಡಿರುತ್ತಾರೆ.

ವರದಿ ಸಾಲಿನಲ್ಲಿ ದಿನಾಂಕ: 16–06–2024 ರಂದು ಶ್ರೀ ಎನ್. ವೆಂಕಟೇಶ್ ಮತ್ತು ದೂರುದಾರರಾದ ಶ್ರೀ ರವಿ ಅಗರ್‌ವಾಲ್ ರವರು ಬ್ಯಾಂಕಿಗೆ ಸಾಲದ ಮೊತ್ತವನ್ನು ಮರುಪಾವತಿ ಮಾಡಿರುತ್ತಾರೆ. ದಿನಾಂಕ: 03–02–2025 ರಂದು ಸನ್ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ಸರ್ಕಾರ ರವರಿಗೆ ಬ್ಯಾಂಕಿನಿಂದ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿದೆ. ಈ ಪ್ರಕರಣದ ಮುಕ್ತಾಯದ ಆದೇಶವನ್ನು ಇಲಾಖೆಯಿಂದ ಪಡೆಯುವ ನಿರೀಕ್ಷೆಯಲ್ಲಿದ್ದೇವೆ.

**ವಿಷಯ 18 :** ನಿರ್ಣಯಗಳನ್ನು ಅಂಗೀಕರಿಸುವುದು (ಇದ್ದಲ್ಲಿ).

ಬ್ಯಾಂಕಿನ ಉಪನಿಯಮ 20(1)(i) ರ ಅನ್ವಯ ಬ್ಯಾಂಕಿನ ಸದಸ್ಯರು ಕನಿಷ್ಠ ಷೇರು ಮೊಬಲಗು ರೂ. 1000/– ಹೊಂದಿರಬೇಕಾಗಿರುತ್ತದೆ. ಸದಸ್ಯರು ಸುಮಾರು 5 ವರ್ಷ ಮೇಲ್ಪಟ್ಟು ಯಾವುದೇ ಮಹಾಸಭೆಗೆ ಹಾಜರಾಗಿರುವುದಿಲ್ಲವೋ ಹಾಗೂ ಬ್ಯಾಂಕಿನಲ್ಲಿ ಯಾವುದೇ ವ್ಯವಹಾರ ಮಾಡಿರುವುದಿಲ್ಲವೋ ಆ ಸದಸ್ಯರ ವಿಳಾಸಕ್ಕೆ ಬ್ಯಾಂಕಿನಿಂದ ಕಳುಹಿಸಿದ ಪತ್ರಗಳು ಹಿಂದಕ್ಕೆ ಬಂದಿದ್ದು, ಅಂತಹ ಸದಸ್ಯರ ಸದಸ್ಯತ್ವನ್ನು ಅಮಾನತ್ತಿನಲ್ಲಿಟ್ಟು ಮುಂದೆ ಯಾವುದೇ ಪತ್ರ ವ್ಯವಹಾರ ಮಾಡುವುದಿಲ್ಲ. ಇದಕ್ಕೆ ಮಹಾಸಭೆಯು ನಿರ್ಣಯ ಕೈಗೊಳ್ಳಬೇಕಾಗಿ ವಿನಂತಿ.

## ತಿದ್ದುಪಡಿಗಳು

| ಬೈಲಾ ನಂ. | ಹಾಲಿ ಇರುವ ಬೈಲಾ |
|---|---|
| 68 | **ನೇರ ನೌಕರಿ ಭರ್ತಿಗೆ ವಯೋಮಿತಿ:**<br>ಬ್ಯಾಂಕಿನ ಯಾವುದೇ ಸೇವೆಯ ಹುದ್ದೆಗೆ ನೇರ ನೌಕರಿ ಭರ್ತಿಯ ನೇಮಕಾತಿಗೆ ಪ್ರತಿ ಅಭ್ಯರ್ಥಿಗೆ ಹದಿನೆಂಟು ವರ್ಷ ವಯಸ್ಸು ತುಂಬಿರತಕ್ಕದ್ದು ಹಾಗೂ ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು, ಅಥವಾ ಸಂದರ್ಭಾನುಸಾರ ನೇಮಕಾತಿ ಪ್ರಾಧಿಕಾರ ಅಥವಾ ನೌಕರಿ ಭರ್ತಿಯ ಸಮಿತಿಯು ನಿರ್ದಿಷ್ಟಪಡಿಸಿದ ಇತರೆ ಯಾವುದೇ ದಿನಾಂಕದಂದು, ಕೆಳಗಿನ ವಯಸ್ಸಿಗೆ ಮೀರದಂತೆ ಇರತಕ್ಕದ್ದು.<br>ಅಭ್ಯರ್ಥಿಯು ಯಾವುದೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ನಲವತ್ತು ವರ್ಷ;<br>ಅಭ್ಯರ್ಥಿಯು ಯಾವುದೇ ಹಿಂದುಳಿದ ಜಾತಿ ಅಥವಾ ಹಿಂದುಳಿದ ಸಮಾಜಕ್ಕೆ ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ಮೂವತ್ತೆಂಟು ವರ್ಷ;<br>ಸಾಮಾನ್ಯ ಸಂಬಂಧದಲ್ಲಿ – ಮೂವತ್ತೈದು ವರ್ಷ;<br>ಪರಂತು, ಈ ನಿಬಂಧವು, ಬ್ಯಾಂಕಿಗೆ ಯಾರ ಸೇವೆಯನ್ನು ಎರವಲು ಪಡೆಯಲಾಗಿದೆಯೋ ಆ ನೌಕರನಿಗೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕವಾದ ನೌಕರನಿಗೆ ಅಥವಾ ಯಾವುದೇ ಸಹಕಾರ ಸಂಘದ ಸೇವೆಯಲ್ಲಿ ಈಗಾಗಲೇ ಇರುವ ಯಾವ ವ್ಯಕ್ತಿಯ ವಯಸ್ಸು ಅಂಥ ಸೇವೆಗೆ ಸೇರುವ ಕಾಲದಲ್ಲಿ ಸಂಬಂಧಪಟ್ಟ ಪ್ರದೇಶಕ್ಕೆ ಅನ್ವಯಿಸುವ ಆಗ ಜಾರಿಯಲ್ಲಿದ್ದ ನಿಯಮಗಳಿಗೆ ಅನುಸಾರವಾಗಿದ್ದಲ್ಲಿ, ಅಂಥ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ;<br>ಪರಂತು ಸಹಕಾರ ಬ್ಯಾಂಕಿನಲ್ಲಿ ಕನಿಷ್ಟ 20 ವರ್ಷ ಸೇವೆ ಸಲ್ಲಿಸಿರುವ ಅಧಿಕಾರಿ ವರ್ಗದವರಿಗೆ ಗರಿಷ್ಟ 10 ವರ್ಷಗಳ ವಯೋಮಿತಿ ಸಡಿಲಿಕೆಯನ್ನು ನೀಡಬಹುದಾಗಿದೆ.<br>**ಅಥವಾ** |
| 2A | **ಹೊಸ ಸೇರ್ಪಡೆ**<br>ಮಾನ್ಯ ಭಾರತೀಯ ರಿಸರ್ವ್ ಬ್ಯಾಂಕ್ ರವರು ಮುಖ್ಯಕಾರ್ಯನಿರ್ವಹಣಾಧಿಕಾರಿ ಕುರಿತ ನೇಮಕ / ವಯೋಮಿತಿ / ಸೇವಾ ಅನುಭವ ಕುರಿತಂತೆ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನ / ಸುತ್ತೋಲೆಗಳನುಸಾರ ಸಕ್ಷಮ ಪ್ರಾಧಿಕಾರಗಳ ಅನುಮತಿ ಪಡೆದು ನೇಮಿಸಿಕೊಳ್ಳಬಹುದು. |

# THE MALLESWARAM CO-OPERATIVE BANK LIMITED

No. 102, East Park Road, 7th Cross, Malleswaram, Bangalore - 560 003.

## PROFIT AND LOSS ACCOUNT FOR THE YEAR ENDED 31ST MARCH 2025

| Expenditure | as on 31-03-2025 | Income | as on 31-03-2025 |
|---|---|---|---|
| To Interest on Deposits | 52,99,68,198.82 | By Interest Received on Loans | 56,09,01,091.88 |
| Staff Cost : Salaries & Allowances | 6,09,15,190.00 | Interest on Investments | 24,54,33,318.40 |
| Director's Fees, allowances & expenses | 10,80,086.00 | Commission Exchange & Brokerage | 93,760.50 |
| Rent, rate & taxes | 43,04,952.20 | Loan Service Charges | 46,55,583.00 |
| Electricity Charges | 5,41,718.88 | Locker Rent | 28,03,581.10 |
| Water Charges | 1,41,875.00 | Miscellaneous Receipts | 38,09,595.52 |
| Insurance | 1,17,25,009.12 | Centenary souvenir Account | 10,000.00 |
| Law Charges | 65,400.00 | Centenary Celebration Income Acct | 0 |
| Postage & Telephones | 4,15,019.91 | Provision no longer required (IDR) | 0.00 |
| Auditors' Fee | 6,77,980.00 | Provision no longer required (UP SPINNING | 40,00,000.00 |
| Repairs & Depreciation | 32,27,003.91 | | |
| Stationery, Printing & Advt. | 7,33,980.15 | | |
| Other Expenditure | 2,34,21,207.40 | | |
| Amortization on HTM Investments | 4,52,120.00 | | |
| **Gross Profit before provision & taxes** | **18,40,37,189.01** | | |
| Prov. for Standard assets | 15,00,000.00 | | |
| Provision for NPA | 8,31,01,122.40 | | |
| Provision for PNCPS | 0.00 | | |
| Profit before Tax | 9,94,36,066.61 | | |
| Provision for Income Tax | 4,18,92,699.00 | | |
| Net Profit | 5,75,43,367.61 | | |
| **Grand Total :** | **82,17,06,930.40** | **Grand Total :** | **82,17,06,930.40** |

## BALANCE SHEET AS AT 31ST MARCH, 2025

| CAPITAL & LIABILITIES | as on 31-03-2025 | PROPERTY AND ASSETS | as on 31-03-2025 |
|---|---|---|---|
| 1. SHARE CAPITAL | | 1. CASH & BANK BALANCES | 30,59,00,,709.54 |
| Authorised Capital | (25,00,00,000) | 2. OTHER BANK BALANCES | 7,72,88,468.71 |
| Subscribed & Paid up Capital | 20,80,87,720.00 | 3. MONEY AT CALL & Short Notice | 0.00 |
| 2. RESERVE FUND & OTHER RESERVE | 102,95,56,447.71 | 4. INVESTMENTS | 356,16,36,424.00 |
| 3. Deposits & Other Accounts | 734,21,51,599.62 | 5. ADVANCES | 481,11,08,247.06 |
| 4. Branch Adjustments : | 0.00 | 6. Interest Receivable | 43,81,32,356.68 |
| 5. Overdue Interest Reserve | 33,62,74,784.11 | 9. Premises | 1,08,80,188.60 |
| 6. Interest Payable | 94,01,049.00 | 10. Furniture and Fixtures | 33,92,759.31 |
| 7. Other Liablities | 25,43,63,896.21 | 11. Plant & Machinery | 1,70,801.87 |
| 8. Profit and Loss | | 12. Computer & accessories | 14,65,428.58 |
| 2023-2024 <Net Profit> 2024-2025 | 5,75,43,367.61 | 13. Electrical Fittings | 20,77,795.32 |
| 9. Contingent Liabilities (DEAF A/C) | 0.00 | 14. Vehicles | 2,89,151.04 |
| (Rs.38476010.69) | | 15. Other Assets | 2,50,36,533.55 |
| | | | |
| **Grand Total :** | **923,73,78,864.26** | **Grand Total :** | **923,73,78,864.26** |

**ವಿಶೇಷ ಸೂಚನೆ :**

ಮಹಾಸಭೆಗೆ ಹಾಜರಾಗಲು ಸದಸ್ಯರು ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು

**ವ್ಯವಹಾರದ ವೇಳೆ**

ಸೋಮವಾರದಿಂದ – ಶನಿವಾರದವರೆಗೆ:

ಬೆಳಿಗ್ಗೆ 09–30 ರಿಂದ ಮಧ್ಯಾಹ್ನ 01–30 ರವರೆಗೆ ಮತ್ತು 02–30 ರಿಂದ ಸಂಜೆ 5.30 ರವರೆಗೆ

2ನೇ ಶನಿವಾರ ಮತ್ತು 4ನೇ ಶನಿವಾರ ರಜೆ ಇರುತ್ತದೆ.

---

**ದಿನಾಂಕ : 31–08–2025 ಭಾನುವಾರ**

**ಬೆಳಿಗ್ಗೆ : 10.00 ಘಂಟೆಗೆ**

**105ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಸೂಚನಾ ಪತ್ರ**

**Book - Post**

**Printed Matter**

**ಗೆ,**

ಶ್ರೀಮತಿ / ಶ್ರೀ

If undelivered, please return to :

**The Malleswaram Co-operative Bank Limited**

No.102, 7th Cross, Malleswaram, Bangalore - 560 003.

Ph: 080-23342713, 080-23341616.